**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 336/2024**

ಚಾ.ಸಾ-04, ಪ್ರಾ.ಸಾ-04

| | | |
|---|---|---|
| ಹೆಸರು | : | ಕೈಲಾಸ್ |
| ತಂದೆಯ ಹೆಸರು | : | ಮಿಶ್ರೀಲಾಲ್ |
| ವಯಸ್ಸು | : | 28 |
| ವೃತ್ತಿ | : | ಚಿನ್ನಬೆಳ್ಳಿ ಕೆಲಸ |
| ವಾಸ | : | ತಿ. ನರಸೀಪುರ ಪಟ್ಟಣ. |

**ದಿನಾಂಕ 29.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ-5 ನನ್ನ ಸಂಬಂಧಿ. ಈ ದಿನ ನ್ಯಾಯಾಲಯದಲ್ಲಿರುವ ಆರೋಪಿತನನ್ನು ನೋಡಿರುವ ಬಗ್ಗೆ ನೆನಪಿಲ್ಲ.

ಕಳೆದ ಒಂದೂವರೆ ವರ್ಷಗಳ ಹಿಂದೆ ಮಧ್ಯಾಹ್ನ 3.00 ರಿಂದ 4.00 ಗಂಟೆ ಸಮಯದಲ್ಲಿ ಪೊಲೀಸರು ನಮ್ಮ ಭವಾನಿ ಚಿನ್ನಬೆಳ್ಳಿ ಅಂಗಡಿಗೆ ಬಂದಿದ್ದರು. ಆ ವೇಳೆಗೆ ಮಹೇಶ್ ಎನ್ನುವ ವ್ಯಕ್ತಿ ನಮ್ಮ ಅಂಗಡಿಯಲ್ಲಿ ಚಿನ್ನದ ಉಂಗುರವನ್ನು ಗಿರವಿ ಇಟ್ಟಿದ್ದಾರೆ ಎಂದು ಹೇಳಿದ್ದು, ಆ ಉಂಗುರವನ್ನು ನಮ್ಮಿಂದ ಪಡೆದು ನನ್ನ ಸಹಿ ಪಡೆದಿರುತ್ತಾರೆ. ಸದರಿ ಉಂಗುರವು 6 ಗ್ರಾಂ ಇತ್ತು.

ಸಾಕ್ಷಿಯು ತನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತಾರೆ. ಆ ಸಹಿಯಿರುವ ದಾಖಲೆಯು ಅಮಾನತ್ತು ಪಂಚನಾಮವಾಗಿದ್ದು, ಅದು ಈಗಾಗಲೇ ನಿಪಿ.4 ಎಂದು

ಗುರುತಿಸಲ್ಪಟ್ಟಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಸದರಿ ಉಂಗುರವು 7 ಗ್ರಾಂ 900 ಮಿಲಿ ಇತ್ತು ಎಂದರೆ ನೆನಪಿಲ್ಲ.

**ಪಾಟೀ ಸವಾಲುಃ ಶ್ರೀ. ಎಂ.ಆರ್. ವಕೀಲರಿಂದ ಆರೋಪಿತನ ಪರ**

ನಮ್ಮ ಅಂಗಡಿಯಲ್ಲಿ ಹೊಸ ಚಿನ್ನದ ಆಭರಣಗಳನ್ನು ಮಾರಾಟ ಮಾಡುವ ಮತ್ತು ಹಳೇ ಚಿನ್ನದ ಆಭರಣಗಳನ್ನು ಗಿರವಿ ಇಡಿಸಿಕೊಳ್ಳುವ ವ್ಯಾಪಾರ ಮಾಡಲಾಗುತ್ತದೆ ಎಂದರೆ ಸರಿ. ಯಾವುದೇ ವ್ಯಕ್ತಿಯು ಚಿನ್ನದ ಆಭರಣಗಳನ್ನು ತಂದು ಗಿರವಿ ಇಟ್ಟರೆ ಅವುಗಳನ್ನು ಪಡೆದುಕೊಂಡು ಅವರಿಗೆ ಹಣ ನೀಡಲಾಗುತ್ತದೆ ಎಂದರೆ ಸರಿ.

ಪೊಲೀಸರು ಸಂಜೆ 4.00 ಗಂಟೆಗೆ ಬಂದಿದ್ದರು. ಇಬ್ಬರು ಪೊಲೀಸರು ಮತ್ತು ಒಬ್ಬ ವ್ಯಕ್ತಿ ನಮ್ಮ ಅಂಗಡಿಗೆ ಬಂದಿದ್ದರು. ನಿಪಿ.4 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಹೇಳಿಕೆ ಮೇರೆಗೆ ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**
**ತಿ.ನರಸೀಪುರ**